ಅಧ್ಯಕ್ಷರು.— ಬೀರೂ ಅವರ ಎಂದಿದೆಯೇ ?

ಶ್ರೀ ಎಂ. ಎಸ್. ಕೃಷ್ಣನ್.— ಅದು ರೂಲ್ಸ್‌ನಲ್ಲಿಲ್ಲದಿದ್ದರೂ ಒಂದು ವಾಡಿಕೆಯಾಗಿದೆ. ನನ್ನ ಪ್ರಶ್ನೆಗಳು ಲ್ಯಾಪ್ಸ್‌ಆಗಿ ಹೋಗುತ್ತವೋ ಎನೋ ಎಂಬ ಸಂಶಯ ನನಗಿದೆ. ಆದ್ದರಿಂದ ಅವುಗಳ ಬಗ್ಗೆ ಜಾಗ್ರತೆಯಾಗಿ ಉತ್ತರವನ್ನು ಸರ್ಕಾರದಿಂದ ತರಿಸುವ ಹಾಗೆ ಮಾಡಬೇಕು.

ಅಧ್ಯಕ್ಷರು.— ಹಾಗಾದರೆ ೨೫ ಪ್ರಶ್ನೋತ್ತರಗಳನ್ನು ಹಾಕಲೇ ?

ಶ್ರೀ ಎಂ. ಎಸ್. ಕೃಷ್ಣನ್.— ಈಗ ಹತ್ತು ಪ್ರಶ್ನೆಗಳು ಇರುವುದನ್ನು ೧೫ ಪ್ರಶ್ನೆಗಳು ಬರುವಹಾಗೆ ನೋಡಿ.

INADEQUATE WORKS IN OLD MYSORE AREAS FOR WHICH PROVISION WAS MADE IN THE BUDGET

ಶ್ರೀ ಬಿ. ಪುಟ್ಟಸ್ವಾಮಯ್ಯ (ಸಿರಾ).— ಅಧ್ಯಕ್ಷರೇ, ಇವತ್ತು ಮಾನ್ಯ ಲೋಕೋಪಯೋಗಿ ಸಚಿವರು ಮತ್ತು ಹಣಕಾಸಿನ ಸಚಿವರು ಈ ಸಭೆಯಲ್ಲಿ ಇದ್ದಾರೆ. ಅವರ ಗಮನಕ್ಕೆ ನಾನು ಒಂದು ವಿಷಯವನ್ನು ತರಬೇಕಾಗಿದೆ. ಹಳೆಯ ಮೈಸೂರು ಭಾಗದಲ್ಲಿ ಏನು ಸರ್ಕಾರದವರು ಬಜೆಟ್ಟಿನಲ್ಲಿ ಹಣವನ್ನು ಒದಗಿಸಿ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಿಗದಿಪಡಿಸಿದ್ದರೋ ಅದರಲ್ಲಿ ನಾನು ಹೇಳುವುದಾದರೆ ಸೇಕಡ ೯೦ಭಾಗದಷ್ಟು ಕಾಮಗಾರಿಗಳು ಇನ್ನೂ ಪ್ರಾರಂಭವೇ ಆಗಿಲ್ಲ. ಅನೇಕ ಕಾಮಗಾರಿಗಳಿಗೆ ಟೆಕ್ನಿಕಲ್ ಅಪ್ರೂವಲ್ ಆಗಿದ್ದರೂ ಅವಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿಲ್ಲವೆಂದು ಸೆಕ್ರೆಟೇರಿಯಟ್ಟಿನಲ್ಲಿಯೇ ಅನೇಕ ಎಸ್ಟಿಮೇಟುಗಳು ಕೊಳೆಯುತ್ತಿರುತ್ತಿವೆ. ಅಲ್ಲಿ ಯಾರನ್ನು ಕೇಳಿದರೂ ಹಣವಿಲ್ಲ ವೆಂದು ಹೇಳುತ್ತಾರೆ. ಆದ್ದರಿಂದಲೇ ಹಳೆಯ ಮೈಸೂರಿನ ಭಾಗದಲ್ಲಿ ಅನೇಕ ಕಾಮಗಾರಿಗಳು ಸ್ಥಗಿತವಾಗಿ ನಿಂತಿರುತ್ತವೆ. ಅನೇಕ ಜನರು ಇತರೇ ಕೋಪಗಳ ಜೊತೆಗೆ ಇದನ್ನೂ ಒಂದು ಸೇರಿಸಿಕೊಂಡಿದ್ದಾರೆ. ಈಗ ಇವರಿಬ್ಬರೂ ಇಲ್ಲಿ ಇರುವುದರಿಂದ ಅದರ ಬಗ್ಗೆ ವಿಚಾರಮಾಡಬೇಕು. ಕಾಮಗಾರಿಗಳು ಬಜೆಟ್ಟಿನಲ್ಲಿ ಎನಿವೆಯೋ ಅವುಗಳ ಬಗ್ಗೆ ಎನಾಯಿತು ಎಂದು ಕೇಳಿದರೆ, ಸೆಕ್ರೆಟೇರಿಯಟ್‌ನಲ್ಲಿ ಇನ್ನೂ ಮುಂಜೂರಾಗಿಲ್ಲವೆಂದು ಹೇಳುತ್ತಾರೆ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲಿಗೆ ಮತ್ತು ಟೆಕ್ನಿಕಲ್ ಅಪ್ರೂವಲಗೋಸ್ಕರ ಅವು ಇಲ್ಲಿಯೇ ನಿಂತಿದೆಯೆಂದು ಹೇಳುತ್ತೇನೆ. ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತಿನೆ. ಇದೇ ವಿಚಾರದಲ್ಲಿ ನಾನು ಹಿಂದಿನ ತಿಂಗಳು ೩೦ನೇ ತಾರೀಖಿನಲ್ಲಿ ಒಂದು ಕಾಲ್ ಅಟೆನಷನ್ ನೋಟೀಷನ್ನೂ ಕೂಡ ಕಳುಹಿಸಿದ್ದೇನೆ. ಆದ್ದರಿಂದ ತಾವು ನಿರ್ದಿಷ್ಟವಾಗಿ ಅಂತಹ ಕಾಲ್‌ಅಟೆನಷನ್ ನೋಟೀಸಗಳಿಗೆ ಇಷ್ಟೇ ದಿವಸಗಳಲ್ಲಿ ಉತ್ತರಗಳನ್ನು ಕೊಡ ಬೇಕೆಂದು ಒಂದು ಕಾಲಾವಧಿಯನ್ನು ನಿಗದಿಮಾಡಬೇಕೆಂದು ನಾನು ಹೇಳುತ್ತೇನೆ. ಮೈಸೂರಿನ ಜನರು ಉದ್ರಿಕ್ತರಾಗುವುದಕ್ಕೆ ಸರ್ಕಾರವೇ ಪ್ರೋದೇಪಣೆ ಮಾಡುತ್ತಿದೆ

ಯೆಂದು ಹೇಳುವ ಹಾಗೆ ಆಗಿದೆ. ಆದ್ದರಿಂದ ದಯಮಾಡಿ ಸರ್ಕಾರದವರು ಇದರ ಬಗ್ಗೆ ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು.

BUDGET ESTIMATES

Supplementary Demands for Grants for the year 1973-74 (I instalment)

Demand No. 17, 20, 23, 27, 31, 33, 44, 45, and 54.

Sri M. Y. GHORPADE (Minister for Finance).— Madam Speaker, On the recommendation of the Governor, I beg to move:

"That a further sum not exceeding Rs. 100- be granted out of the Consolidated Fund of the State to defray the charges which will come in course of payment during the year ending the 31st day of March 1974 in respect of Demand No. 17 Education (Excluding Youth Services)".

MADAM SPEAKER.— Motion moved:

"That a further sum not exceeding Rs. 100/- be granted out of the Consolidated Fund of the State to defray the charges which will come in course of payment during the year ending the 31st day of March 1974 in respect of Demand No. 17 Education (Excluding Youth Services)."

All the other Demands are also before the House for discussion.

†ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಈ ಸದನದ ಮುಂದೆ ಮಂಡಿಸಿರತಕ್ಕಂಥ ಈ ಹೆಚ್ಚುವರಿ ಬೇಡಿಕೆಗಳ ಬಗ್ಗೆ ನಾನು ವಿರೋಧ ಮಾಡುತ್ತಾ ಕೆಲವಾರು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ.

ಭಾರತದ ರಾಜ್ಯಾಂಗದಲ್ಲಿ ಒಂದು ಆರ್ಟಿಕಲ್ ಇದೆ. ಅದು ೨೦೫ನೇ ಆರ್ಟಿಕಲ್. ಅದರ ಪ್ರಕಾರ ತಮಗೆ ಗೊತ್ತಿರುವ ಹಾಗೆ ಎಲ್ಲ ರಾಜ್ಯಗಳು ಆಯಾ ರಾಜ್ಯದ ಪ್ರತಿವರ್ಷದ ಆಯವ್ಯಯಪಟ್ಟಿಯನ್ನು ತಯಾರುಮಾಡುವಾಗ ಆಯಾ ರಾಜ್ಯದ ಅಥವಾ ದೇಶದ ಉತ್ಪನ್ನ ಮತ್ತು ಖರ್ಚು— ಇವೆರಡನ್ನೂ ಕೂಡ